ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಕ್ಷಾಬಂಧನದ ಪ್ರಯುಕ್ತ ಭಾರತ್-ಟಿಬೇಟನ್ ಸಹಯೋಗ್ ಮಂಚ್ ಸಂಬಂಧಿಸಿದ ಸಹೋದರಿಯರು ನಾಗ್ಪುರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಧಾನ ಕಛೇರಿಯಲ್ಲಿ ಸರಸಂಘಚಾಲಕ್ ಡಾ. ಮೋಹನ್ ಭಾಗವತ್ ಅವರಿಗೆ ರಕ್ಷೆಯನ್ನು ಕಟ್ಟಿದರು.

ಸಂಪುಟ : 45 | ಸಂಚಿಕೆ : 11 | ನಿಜಶ್ರಾವಣ-ಭಾದ್ರಪದ | ಕಲಿಯುಗಾಬ್ದ 5125 | 15-09-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಶಿಕ್ಷಣ ವ್ಯವಸ್ಥೆಗೆ ಭದ್ರಬುನಾದಿಯೊದಗಿಸುವ ಎನ್‌ಇಪಿ–2020

■ ಅರುಣ್ ಶಹಾಪುರ

ಬಡವ, ಶ್ರೀಮಂತರ ಮಕ್ಕಳು ಎನ್ನದೇ ಎಲ್ಲ ವರ್ಗ, ಸಮುದಾಯ, ಪ್ರದೇಶದ ಮಕ್ಕಳಿಗೂ ಸಮಾನ ಗುಣಮಟ್ಟದ ಶಿಕ್ಷಣವನ್ನು ನೀಡುವಂತೆ ರೂಪಿಸಿರುವ 'ರಾಷ್ಟ್ರೀಯ ಶಿಕ್ಷಣ ನೀತಿ–2020' ಅನ್ನು ಮುಂದಿನ ವರ್ಷ ರದ್ದುಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ದುರಂತವೆಂದರೆ, ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಭವಿಷ್ಯದ ಬಗ್ಗೆ ಆಲೋಚನೆಗಳಿಲ್ಲದೇ, ಯಾವುದೇ ಮಹತ್ವದ ಸುಧಾರಣೆ, ಬದಲಾವಣೆಗಳನ್ನು ತಾರದೆ ಅಮೂಲ್ಯ ಐದುವರೆ ದಶಕಗಳನ್ನು ಈ ಹಿಂದಿನ ಸರ್ಕಾರದ ನಾಯಕರು ವ್ಯರ್ಥ ಮಾಡಿದ್ದಾರೆ. ಆದರೆ, ಜನರ ಅಭೂತಪೂರ್ವ ಆಶೀರ್ವಾದದೊಂದಿಗೆ ಅಧಿಕಾರಕ್ಕೆ ಬಂದ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಶಿಕ್ಷಣದ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಹಲವು ವರ್ಷಗಳವರೆಗೆ ಅಧ್ಯಯನ ನಡೆಸಿ ಭವಿಷ್ಯದ ಅಗತ್ಯಕ್ಕೆ ತಕ್ಕಂತೆ 'ರಾಷ್ಟ್ರೀಯ ಶಿಕ್ಷಣ ನೀತಿ–2020' ಅನ್ನು ರೂಪಿಸಿದೆ.


**ಎನ್‌ಇಪಿ–2020 ರದ್ಧತಿ – ಸರ್ಕಾರಿ ಶಾಲಾ ಮಕ್ಕಳಿಗೆ ಮಾಡುವ ಅನ್ಯಾಯ:** ಸ್ಪರ್ಧಾತ್ಮಕ ಮತ್ತು ಸಮಾನ ಶಿಕ್ಷಣಕ್ಕೆ ನೂತನ ಶಿಕ್ಷಣ ನೀತಿ ಸಮರ್ಥವಾಗಿದೆ. ಇಂತಹ ನೀತಿಯನ್ನು ರಾಜ್ಯದಲ್ಲಿ ರದ್ದುಗೊಳಿಸಿದರೆ ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಬಹುದೊಡ್ಡ ಶೈಕ್ಷಣಿಕ ಅನ್ಯಾಯ ಮಾಡಿದಂತಾಗುತ್ತದೆ. ಏಕೆಂದರೆ, ಸಿಬಿಎಸ್‌ಇ ಪಠ್ಯಕ್ರಮದ ಖಾಸಗಿ ಶಾಲೆಗಳು ಈಗಾಗಲೇ ಎನ್‌ಇಪಿ–2020 ಅಳವಡಿಸಿಕೊಂಡಿವೆ. ಅದರಲ್ಲೂ ಎನ್‌ಇಪಿ ವಿರೋಧಿಸುವ ಶಾಸಕರ ಶಾಲೆಗಳಲ್ಲೇ ಎನ್‌ಇಪಿ ಪಠ್ಯಕ್ರಮ, ಪಠ್ಯಕ್ಕೆ ಪೂರಕವಾದ ಚಟುವಟಿಕೆಗಳನ್ನು ಪಾಲಿಸಲಾಗುತ್ತಿದೆ.

**ಸರ್ಕಾರಿ ಶಾಲೆಗಳ ವ್ಯವಸ್ಥೆ ಬಲಪಡಿಸುವ ಎನ್‌ಇಪಿ–2020:** ಸರ್ಕಾರಿ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ಮಕ್ಕಳ ಪ್ರವೇಶಾತಿ ಕಡಿಮೆಯಾಗುತ್ತಿದೆ. ಮಕ್ಕಳ ಸಂಖ್ಯೆಯ ಕೊರತೆ ಕಾರಣ ಅನಿವಾರ್ಯವಾಗಿ ಬಾಗಿಲು ಹಾಕಲಾಗಿದೆ. ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಸರ್ಕಾರಿ ಶಾಲೆಗಳ ವ್ಯವಸ್ಥೆಯನ್ನು ಬಲಪಡಿಸಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಧನಾತ್ಮಕ ಅಂಶಗಳನ್ನು ಎನ್‌ಇಪಿ ಹೊಂದಿದೆ.

ಸರ್ಕಾರಿ ಶಾಲೆಗಳ ಪೈಕಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಹೊರತುಪಡಿಸಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಶಾಲಾ ಶಿಕ್ಷಣ ಒಂದನೇ ತರಗತಿಯಿಂದ ಆರಂಭವಾಗುತ್ತಿದೆ. ಆದರೆ, ಮಗುವಿಗೆ ಮೂರನೇ ವರ್ಷದಿಂದಲೇ ಶಿಕ್ಷಣ ವ್ಯವಸ್ಥೆಯೊಳಗೆ ಕರೆತರುವ 'ಬುನಾದಿ ಹಂತದ ಶಿಕ್ಷಣ/ಪೂರ್ವ ಪ್ರಾಥಮಿಕ ಶಿಕ್ಷಣ'ವನ್ನು ಎನ್‌ಇಪಿ ಹೊಂದಿದೆ. ಅದಕ್ಕಾಗಿ ಅಂಗನವಾಡಿ ಕೇಂದ್ರಗಳನ್ನು ಬುನಾದಿ ಹಂತದ ಶಿಕ್ಷಣಕ್ಕಾಗಿ ಬಳಕೆ ಮಾಡಿಕೊಳ್ಳಲಾಗುತ್ತದೆ.

ಹಾಲಿ ಅಂಗನವಾಡಿಗಳಲ್ಲಿ ಆರೈಕೆ, ಪೌಷ್ಟಿಕ ಆಹಾರ, ಆರೋಗ್ಯದ ಕಡೆ ಗಮನ ಹಾಗೂ ಚಿಲಿಪಿಲಿ ಮೂಲಕ ಅಕ್ಷರಜ್ಞಾನ, ಲಘು ಆಟಗಳು, ಚಟುವಟಿಕೆಗಳನ್ನು ಮಾಡಿಸಲಾಗುತ್ತಿದೆ. ಆದರೆ, ಎನ್‌ಇಪಿಯು, ಇದಕ್ಕೆಂದೇ ಶೈಕ್ಷಣಿಕ ಚೌಕಟ್ಟನ್ನು ಹೊಂದುವುದಕ್ಕೆ ಒತ್ತು ನೀಡಿದೆ. ಆಡುತ್ತಾ ಕಲಿಯುವ, ನಲಿಯುತ್ತಾ ಕಲಿಯುವ, ಆಟಿಕೆಗಳ ಮೂಲಕ ಕಲಿಯುವ ವಾತಾವರಣ ಹಾಗೂ ಸಮಗ್ರ ಪೂರಕ ವ್ಯವಸ್ಥೆಯನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

**ಶಿಕ್ಷಣ ಗೋಳಲ್ಲ, ಗೌರವ ಎನ್ನುವುದನ್ನು ಸಾರುವ ಎನ್‌ಇಪಿ–2020:** ವಿದೇಶಗಳಲ್ಲಿ ಶಾಲೆಗೆ ಹೋಗಲು ಮಕ್ಕಳ ಪ್ರತಿರೋಧ ಕಡಿಮೆ. ಆದರೆ, ಭಾರತ ದೇಶದಲ್ಲಿ ಮಾತ್ರ ಶಾಲೆಗೆ ಮಕ್ಕಳನ್ನು ಕಳುಹಿಸಲು ಪಾಲಕರು ಹರಸಾಹಸ ಪಡುತ್ತಾರೆ. ಮಕ್ಕಳು ಗೋಳಾಡುವ ದೃಶ್ಯ ಸರ್ವೇ ಸಾಮಾನ್ಯವಾಗಿದೆ. ಹೀಗಾಗಿ, ಮಕ್ಕಳು ಖುಷಿಯಾಗಿ ಶಿಕ್ಷಣ ಪಡೆಯುವ ಶೈಕ್ಷಣಿಕ ವ್ಯವಸ್ಥೆಯನ್ನು ತರಬೇಕು ಎಂಬ ಪ್ರತಿಪಾದನೆಯನ್ನು ಎನ್‌ಇಪಿಯಲ್ಲಿ ಮಾಡಲಾಗಿದೆ. ಹಂತ ಹಂತವಾಗಿ ಪೂರ್ವ ಪ್ರಾಥಮಿಕ ಹಂತದ ಶಿಕ್ಷಣವನ್ನು ಉನ್ನತೀಕರಿಸುತ್ತಾ ಮಾದರಿ




ಶಿಕ್ಷಣ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲಿದೆ.

ಅಂಗನವಾಡಿಗಳ ಜವಾಬ್ದಾರಿಯನ್ನು 'ಅಂಗನವಾಡಿ ಕಾರ್ಯಕರ್ತೆಯರು' ಹೊಂದಿದ್ದಾರೆ. ಆದರೆ, ಆ ಕಾರ್ಯಕರ್ತೆಯರನ್ನು 'ಶಿಕ್ಷಕ'ರನ್ನಾಗಿಸಲು, ಅವರ ಬೋಧನಾ ಸ್ಥರವನ್ನು ಮೇಲ್ದರ್ಜೆಗೆ ಏರಿಸಲು ಎನ್‌ಇಪಿ ಒತ್ತು ನೀಡಿದೆ. ಪೂರ್ವ ಪ್ರಾಥಮಿಕ ಶಿಕ್ಷಕರಾಗಿ ರೂಪಿಸಲು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಪೈಕಿ 10ನೇ ತರಗತಿ ಮುಗಿಸಿರುವ ಕಾರ್ಯಕರ್ತರಿಗೆ ಒಂದು ವರ್ಷದ ತರಬೇತಿ ಮತ್ತು ಪಿಯು ಮುಗಿಸುವ ಕಾರ್ಯಕರ್ತರಿಗೆ 6 ತಿಂಗಳ ತರಬೇತಿ ನೀಡುವುದನ್ನು ಪ್ರಸ್ತಾಪಿಸಲಾಗಿದೆ. ಹಂತ ಹಂತವಾಗಿ ಈಗ ಇರುವ ಅಂಗನವಾಡಿ ಕಾರ್ಯಕರ್ತರನ್ನೇ ಶಿಕ್ಷಕರನ್ನಾಗಿಸುವುದು ಹಾಗೂ ಅವರ ಗುಣಮಟ್ಟವನ್ನು ಉನ್ನತಗೊಳಿಸುವ ಅಂಶಗಳನ್ನು ಎನ್‌ಇಪಿ ಹೊಂದಿದೆ.

ಬುನಾದಿ ಹಂತದ ಶಿಕ್ಷಣಕ್ಕೆ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ನಂಬಿಕೊಂಡಿರುವ ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಅಲ್ಲಿರುವ ಶಿಕ್ಷಕರು ಸಮರ್ಥರಾಗಿರಬೇಕು. ಅಲ್ಲಿರುವ ಮೂಲಸೌಕರ್ಯಗಳು ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದಂತೆ ಬೆಳೆಸಬೇಕು ಎನ್ನುವ ಅಂಶಗಳು ಎನ್‌ಇಪಿಯಲ್ಲಿವೆ.

**ಸರ್ವರಿಗೂ ಸಮಾನ ಶಿಕ್ಷಣ:** ವೈಜ್ಞಾನಿಕ ಕಲಿಕಾ ವಿಧಾನಗಳು, ನಿರ್ಧಾರಿತ ಗುಣಮಟ್ಟದ ಮೂಲಸೌಕರ್ಯ ಮತ್ತು ಕಟ್ಟಡಗಳು ಇರುವ ಬಗ್ಗೆ ಎನ್‌ಇಪಿ ತಿಳಿಸಿದೆ. ಇದರಿಂದ ಮಗುವಿಗೆ 3 ವರ್ಷ ದಾಟುತ್ತಿದ್ದಂತೆಯೇ ಖಾಸಗಿ ಕೇಂದ್ರಗಳಿಗೆ ತೆರಳುವ ಮಕ್ಕಳಂತೆ ಬಡವರ ಮಕ್ಕಳಿಗೂ ಉತ್ತಮ ಶಿಕ್ಷಣ ಸಿಗುತ್ತದೆ. ಒಂದು ವೇಳೆ ಎನ್‌ಇಪಿ ರದ್ದುಪಡಿಸಿದರೆ ಶಿಕ್ಷಣದಲ್ಲಿ ತಾರತಮ್ಯ ಮುಂದುವರೆಸಿದಂತಾಗುತ್ತದೆ. ಶ್ರೀಮಂತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ. ಉಳಿದವರ ಮಕ್ಕಳಿಗೆ ಭವಿಷ್ಯದ ಆಲೋಚನೆಗಳು ಇಲ್ಲದ ಶಿಕ್ಷಣ ನೀಡಿದಂತಾಗುತ್ತದೆ.

ಅನೇಕ ಶೈಕ್ಷಣಿಕ ಸಂಶೋಧನಾ ಸಂಸ್ಥೆಗಳು ನಡೆಸಿರುವ ಸಮೀಕ್ಷೆಯ ಪ್ರಕಾರ, ಏಳನೇ ತರಗತಿಯಲ್ಲಿ ಓದುತ್ತಿರುವ ಮಗುವಿಗೆ 2–3ನೇ ತರಗತಿ ಮಟ್ಟದ ಓದು, ಬರಹ, ಲೆಕ್ಕ, ಸಂಖ್ಯಾಜ್ಞಾನ ಇಲ್ಲ ಎಂದು ತಿಳಿದು ಬಂದಿದೆ. ಇದಕ್ಕೆ ಪರಿಹಾರವಾಗಿ ಮಕ್ಕಳಿಗೆ ಓದಲು, ಬರೆಯಲು, ಸಂಖ್ಯಾ ಜ್ಞಾನದೊಂದಿಗೆ ಲೆಕ್ಕ ಮಾಡುವ ಸಾಮರ್ಥ್ಯವನ್ನು ವೃದ್ಧಿಸಲು 'ಬುನಾದಿ ಹಂತದ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಅಭಿಯಾನ'ವನ್ನು ಎನ್‌ಇಪಿ ಮೂಲಕ ಕೈಗೊಳ್ಳಲಾಗಿದೆ.

**ವೃತ್ತಿಪರ ಶಿಕ್ಷಣದ ಧ್ಯೇಯ:** ನಮ್ಮ ದೇಶದ ನಿರುದ್ಯೋಗ ಸಮಸ್ಯೆಗೆ ಕೌಶಲ್ಯ ಇಲ್ಲದಿರುವುದು ಪ್ರಮುಖ ಕಾರಣ. ಉದ್ಯೋಗ ಮಾರುಕಟ್ಟೆಯ ಅಗತ್ಯತೆಗಳಿಗೆ ತಕ್ಕಂತೆ ಶಿಕ್ಷಣವನ್ನು ನೀಡಲಾಗುತ್ತಿಲ್ಲ. ಅದಕ್ಕಾಗಿಯೇ ಶಾಲಾ ಶಿಕ್ಷಣದ ಹಂತದಲ್ಲಿಯೇ ಮಕ್ಕಳಿಗೆ ಕನಿಷ್ಠ ಒಂದು ವೃತ್ತಿಪರ ಶಿಕ್ಷಣ ಕೌಶಲ್ಯವನ್ನು ನೀಡುವುದನ್ನು ಎನ್‌ಇಪಿ ಪ್ರತಿಪಾದಿಸಿದೆ.

ಸಾಧ್ಯವಾದರೆ 6ನೇ ತರಗತಿಯಿಂದಲೇ ವೃತ್ತಿಪರ ಶಿಕ್ಷಣ ಆರಂಭಿಸುವ ಶಿಫಾರಸ್ಸು ಕೂಡ ಎನ್‌ಇಪಿಯಲ್ಲಿ ಇದೆ. ರಾಷ್ಟ್ರೀಯ ಕೌಶಲ್ಯ ಗುಣಮಟ್ಟ ಚೌಕಟ್ಟನ್ನು (NSQF) ಶಾಲಾ ಶಿಕ್ಷಣದಿಂದಲೇ ಜಾರಿ ಮಾಡುವ ಅಗತ್ಯವಿದೆ. ಶಿಕ್ಷಣದ ಜೊತೆಗೆ ಕೌಶಲ್ಯವನ್ನು ಹೊಂದುವುದು ಎನ್‌ಇಪಿಯ ಮೂಲ ವಿಷಯವಾಗಿದೆ. ವೃತ್ತಿಪರ ಶಿಕ್ಷಣದ ಜೊತೆಗೆ ಕೌಶಲ್ಯವನ್ನು ಕಲಿಸಬೇಕು. ಸ್ಥಳೀಯವಾಗಿ ಲಭ್ಯವಾಗುವ, ಸೃಷ್ಟಿಸಬಹುದಾದ ಉದ್ಯೋಗಗಳನ್ನು ಮಾಡಲು ಬೇಕಾದ ಕೌಶಲ್ಯವನ್ನು ಶಾಲಾ ಶಿಕ್ಷಣ ಹಂತದಲ್ಲಿ ನೀಡಬೇಕು ಎಂದು ಎನ್‌ಇಪಿ ಹೇಳಿದೆ.

**ರಾಜಕೀಯ ದ್ವೇಷ, ಮುಳುಗಿಸದಿರಲಿ ವಿದ್ಯಾರ್ಥಿಗಳ ಭವಿಷ್ಯ:** ಬುನಾದಿ ಹಂತದಿಂದ ಹಿಡಿದು, ಉನ್ನತ ಶಿಕ್ಷಣದವರೆಗೆ ಕಲಿಕೆ, ಕೌಶಲ್ಯ, ವೃತ್ತಿಪರತೆ, ಮೌಲ್ಯಗಳು, ಪಠ್ಯೇತರ ಚಟುವಟಿಕೆಗಳಿಗೆ ಒತ್ತು ನೀಡುವ ಎನ್‌ಇಪಿ ವಿರೋಧಿಸಲು ಸರ್ಕಾರಕ್ಕೆ ಯಾವುದೇ ಕಾರಣಗಳು ಇಲ್ಲ. ಕಾರಣ ಇದ್ದರೆ ಅದು ರಾಜಕೀಯ ಮಾತ್ರ. ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಬಡವರ ಮಕ್ಕಳಿಗೆ ಅನ್ಯಾಯ ಮಾಡುವುದು ಸರಿಯಲ್ಲ. ಇಂದು ನಮ್ಮ ಮಕ್ಕಳಿಗೆ ನಾವು ಉತ್ತಮ ಶಿಕ್ಷಣ ನೀಡದಿದ್ದರೆ ಅದು ನಮ್ಮ ದೇಶದ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಒಟ್ಟಾರೆಯಾಗಿ ದೇಶದ ಪ್ರಗತಿ, ಸಮಾನ ಶಿಕ್ಷಣ ಉದ್ದೇಶಗಳಿಗೆ ಕೊಡಲಿ ಪೆಟ್ಟು ನೀಡುತ್ತದೆ.


ಎನ್‌ಇಪಿ ಅನುಷ್ಠಾನ ವಿಚಾರದಲ್ಲಿ ರಾಜಕಾರಣ ಮಾಡುವ ಬದಲು ಅದರಲ್ಲಿನ ಲೋಪಗಳ ಬಗ್ಗೆ ರಾಜ್ಯ ಸರ್ಕಾರ ಬಹಿರಂಗವಾಗಿ ದಾಖಲೆ ಸಮೇತ ತಿಳಿಸಬೇಕು. ಅದಕ್ಕೆ ತಮ್ಮ ಬಳಿ ಪರ್ಯಾಯವಾದ ಅವಕಾಶಗಳು ಏನಿವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಯಾವುದೇ ಚರ್ಚೆಗಳು, ಜನರ ಅಭಿಪ್ರಾಯಗಳು ಇಲ್ಲದೇ ಎನ್‌ಇಪಿ ರದ್ದುಗೊಳಿಸಲು ಮುಂದಾಗಿರುವುದು ಕೆಟ್ಟ ನಿರ್ಧಾರ. ಸರ್ಕಾರ ಈ ನಿರ್ಧಾರದಿಂದ ಹಿಂದೆ ಸರಿಯಬೇಕು.

**N.E.P - 2020 ರದ್ದುಗೊಳಿಸಿದರೆ ಪರಿಣಾಮವೇನು? ಬೆಂಗಳೂರಿನ ನೃಪತುಂಗ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್. ಶ್ರೀನಿವಾಸ ಬಳ್ಳಿಯವರು ಹೇಳಿರುವ ಅಂಶಗಳು.**

- ಎನ್‌ಇಪಿ ರದ್ದುಗೊಳಿಸಿದರೆ ನೀತಿ ಅಡಿ ವ್ಯಾಸಂಗ ಮಾಡಿರುವ 2 ಬ್ಯಾಚ್ ವಿದ್ಯಾರ್ಥಿಗಳು ಅತಂತ್ರವಾಗಲಿದ್ದಾರೆ. ಶೈಕ್ಷಣಿಕ ಸಮುದಾಯದಲ್ಲಿ ಅನಾವಶ್ಯಕವಾಗಿ ಗೊಂದಲ ನಿರ್ಮಾಣವಾಗುತ್ತದೆ. ಶೈಕ್ಷಣಿಕ ಸುಧಾರಣೆಯ ವೇಗ ಕುಂಠಿತಗೊಳ್ಳುತ್ತದೆ. ಹಲವು ವರ್ಷಗಳಿಂದ ಹಾಕಿರುವ ಶ್ರಮ, ಸಮಯ ಮತ್ತು ಹಣ ವ್ಯರ್ಥವಾಗುತ್ತದೆ.
- ಈ ದೂರಗಾಮಿ ವ್ಯತಿರಿಕ್ತ ಪರಿಣಾಮವು ಆರ್ಥಿಕ, ಔದ್ಯೋಗಿಕ, ಸಾಂಸ್ಕೃತಿಕ, ಸಾಮಾಜಿಕ ರಂಗಗಳ ಅಭಿವೃದ್ಧಿಯ ಮೇಲೆ ಆಗುತ್ತದೆ.
- ಈ ರಾಜ್ಯದಲ್ಲಿ ಮಾತ್ರ ಎಸ್‌ಇಪಿ ವ್ಯಾಸಂಗ ಮಾಡಿದರೆ, ಕರ್ನಾಟಕ ಮತ್ತು ಉಳಿದ ರಾಜ್ಯಗಳ ನಡುವೆ ಶೈಕ್ಷಣಿಕ ಕಂದಕ ಸೃಷ್ಟಿಯಾಗುತ್ತದೆ. ಮುಖ್ಯವಾಹಿನಿಯಿಂದ ವಿದ್ಯಾರ್ಥಿಗಳು ವಿಮುಖರಾಗುತ್ತಾರೆ.
- ರಾಜ್ಯದ ವಿದ್ಯಾರ್ಥಿಗಳು ಬೇರೆ ರಾಜ್ಯದ ವಿವಿಗಳಲ್ಲಿ ಮತ್ತು ಪರ ರಾಜ್ಯಗಳ ವಿದ್ಯಾರ್ಥಿಗಳು ನಮ್ಮ ವಿವಿಗಳಲ್ಲಿ ವಲಸೆ ಹೋಗಲು ಸಾಧ್ಯವಾಗುವುದಿಲ್ಲ.
- ಬೇರೊಂದು ವಿವಿಗಳಲ್ಲಿ ತಮ್ಮ ಆಸಕ್ತಿ ವಿಷಯ ಓದಿ ಪಡೆದ ಕ್ರೆಡಿಟ್ ಅಂಕಗಳನ್ನು ಮತ್ತೊಂದು ವಿವಿಗೆ ವರ್ಗಾವಣೆ ಮಾಡಲಾಗುವುದಿಲ್ಲ.

## ಸಂಸ್ಮರಣೆ

# ಪ್ರೊ. ಸತೀಶ್ ಧವನ್ (25 ಸೆಪ್ಟೆಂಬರ್ 1920 – 3 ಜನವರಿ 2002)



ಪ್ರೊ. ಸತೀಶ್ ಧವನ್ ಅವರು ಸುಪ್ರಸಿದ್ಧ ಭಾರತೀಯ ರಾಕೆಟ್ ವಿಜ್ಞಾನಿ. ಅವರನ್ನು ಭಾರತೀಯ ವೈಜ್ಞಾನಿಕ ಸಮುದಾಯದಲ್ಲಿ father of experimental fluid dynamics research in India ಎಂದು ಪರಿಗಣಿಸಲಾಗಿದೆ. ಪ್ರಕ್ಷುಬ್ಧತೆ ಮತ್ತು ಗಡಿ ಪದರಗಳ ಕ್ಷೇತ್ರದಲ್ಲಿ ಅತ್ಯಂತ ಪ್ರಖ್ಯಾತ ಸಂಶೋಧಕರಲ್ಲಿ ಒಬ್ಬರು.

**ವಿದ್ಯಾಭ್ಯಾಸ:** ಪ್ರೊ.ಸತೀಶ್ ಧವನ್ ಅವರು ಭಾರತ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಶಿಕ್ಷಣವನ್ನು ಪಡೆದರು. ಗಣಿತ ಮತ್ತು ಭೌತಶಾಸ್ತ್ರದಲ್ಲಿ ಬಿ.ಎ, ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ, 1945ರಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ, 1947ರಲ್ಲಿ ಏರೋನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಎಂಎಸ್, ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಲಾಹೋರ್‌ನಲ್ಲಿರುವ ಪಂಜಾಬ್ ವಿಶ್ವವಿದ್ಯಾಲಯ, ಮಿನ್ನೇಸೋಟ ವಿಶ್ವವಿದ್ಯಾಲಯ, ಮಿನ್ನಿಯಾಪೋಲಿಸ್, ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ ಅಧ್ಯಯನ ನಡೆಸಿದ್ದಾರೆ. 1949ರಲ್ಲಿ ಏರೋನಾಟಿಕಲ್ ಇಂಜಿನಿಯರ್ ಪದವಿ, 1951ರಲ್ಲಿ ಏರೋನಾಟಿಕ್ಸ್ ಮತ್ತು ಗಣಿತಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದಿದ್ದಾರೆ.

**ವೃತ್ತಿ ಜೀವನ:** 1951ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ, 1955ರಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ, 1962–1981ರವರೆಗೆ ಅದರ ನಿರ್ದೇಶಕರಾಗಿ ಕರ್ತವ್ಯ ನಿಭಾಯಿಸಿದ್ದಾರೆ. ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, USAನಲ್ಲಿ 1971–72ರಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. 1977–1979ರವರೆಗೆ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 1984–93ರವರೆಗೆ ಬೆಂಗಳೂರಿನ ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರೀಸ್‌ನ ಸಂಶೋಧನಾ ಮಂಡಳಿಯ ಅಧ್ಯಕ್ಷರಾಗಿದ್ದರು.

**ಇಸ್ರೋ ಅಧ್ಯಕ್ಷರಾಗಿ:** ಬಾಹ್ಯಾಕಾಶ ಕಾರ್ಯಕ್ರಮದ ಸಂಸ್ಥಾಪಕರಾದ ವಿಕ್ರಮ್ ಸಾರಾಭಾಯ್ ಅವರ ನಂತರ 1972–84ರವರೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಅಧ್ಯಕ್ಷರಾದರು. ಅವರು ಬಾಹ್ಯಾಕಾಶ ಆಯೋಗದ ಅಧ್ಯಕ್ಷರಾಗಿದ್ದರು ಮತ್ತು ಬಾಹ್ಯಾಕಾಶ ಇಲಾಖೆಯಲ್ಲಿ ಭಾರತ ಸರ್ಕಾರದ ಕಾರ್ಯದರ್ಶಿಯಾಗಿದ್ದರು. ಅವರ ನೇಮಕಾತಿಯ ನಂತರದ ದಶಕದಲ್ಲಿ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ಅಸಾಧಾರಣ ಬೆಳವಣಿಗೆ ಮತ್ತು ಅದ್ಭುತ ಸಾಧನೆಯನ್ನು ಗೈಯುವತ್ತ ನಿರ್ದೇಶಿಸಿದರು.

**ಸಾಧನೆ:** ಡಾ. ಸತೀಶ್ ಧವನ್ ಅವರು ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮದ ಮುಖ್ಯಸ್ಥರಾಗಿದ್ದಾಗಲೂ ಅವರು ಗಡಿ ಪದರದ ಸಂಶೋಧನೆಗೆ ಗಣನೀಯ ಪ್ರಯತ್ನಗಳನ್ನು ಮಾಡಿದರು. ಈ ಕುರಿತಾದ ಅವರ ಪ್ರಮುಖ ಕೊಡುಗೆಗಳನ್ನು ಹರ್ಮನ್ ಸ್ಲಿಚ್ಟಿಂಗ್ ಅವರ ಪುಸ್ತಕ ಬೌಂಡರಿ ಲೇಯರ್ ಥಿಯರಿಯಲ್ಲಿ ಪ್ರಸ್ತುತಪಡಿಸಲಾಗಿದೆ. IIScಯಲ್ಲಿ ಭಾರತದ ಮೊದಲ ಸೂಪರ್‌ಸಾನಿಕ್ ವಿಂಡ್ ಟನಲ್ ಅನ್ನು ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಪ್ರೊ. ಸತೀಶ್ ಧವನ್ ಅವರು ಗ್ರಾಮೀಣ ಶಿಕ್ಷಣ, ದೂರಸಂವೇದಿ ಮತ್ತು ಉಪಗ್ರಹ ಸಂವಹನಗಳಲ್ಲಿ ಪ್ರವರ್ತಕ ಪ್ರಯೋಗಗಳನ್ನು ನಡೆಸಿದರು. ಅವರ ಪ್ರಯತ್ನಗಳು INSAT– ದೂರಸಂಪರ್ಕ ಉಪಗ್ರಹ, IRS – ಭಾರತೀಯ ರಿಮೋಟ್ ಸೆನ್ಸಿಂಗ್ ಉಪಗ್ರಹ ಮತ್ತು ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (PSLV) ನಂತಹ ಕಾರ್ಯಾಚರಣೆಯ ವ್ಯವಸ್ಥೆಗಳಿಗೆ ಕಾರಣವಾಯಿತು. ಅದು ಭಾರತವನ್ನು ಬಾಹ್ಯಾಕಾಶ ಪ್ರಯಾಣದ ರಾಷ್ಟ್ರಗಳ ಸಾಲಿನಲ್ಲಿ ಗುರುತಿಸುವಿಕೆಗೆ ಕಾರಣವಾಯಿತು.

ರಾಷ್ಟ್ರದ ಎರಡು ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗಳು ಇವರಿಗೆ ಲಭಿಸಿದೆ. 1971ರಲ್ಲಿ ಪದ್ಮಭೂಷಣ, 1981ರಲ್ಲಿ ಪದ್ಮವಿಭೂಷಣ ಗೌರವಗಳು ಸಂದಿವೆ. 2002ರಲ್ಲಿ ಅವರ ಮರಣದ ನಂತರ, ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಭಾರತೀಯ ಉಪಗ್ರಹ ಉಡಾವಣಾ ಕೇಂದ್ರಕ್ಕೆ ಪ್ರೊ. ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ಎಂದು ಮರುನಾಮಕರಣ ಮಾಡಲಾಯಿತು.

# ಆಧುನಿಕ ಸಂತ – ಮಾಧವರಾವ್ ಕಾಣೆ

ಸರ್ವ ಋತುವಿನಲ್ಲೂ ಅತ್ಯಂತ ಸಾಧಾರಣವಾದ ಜುಬ್ಬ ಹಾಗೂ ಪಂಚೆಯನ್ನು ತೊಟ್ಟು ತಲಾಸರಿಯ ದಟ್ಟವಾದ ವನವಾಸಿ ಹಳ್ಳಿಗಳಲ್ಲಿ ಮೈಲುಗಟ್ಟಲೆ ಕಾಲ್ನಡಿಗೆಯಲ್ಲಿ ಚಲಿಸಿ ಅಲ್ಲಿಯ ಮಕ್ಕಳಿಗೆ ಜ್ಞಾನದ ಬಾಗಿಲನ್ನು ತೆರೆದವರು ಮಾಧವರಾವ್ ಕಾಣೆಯವರು. ಇಂದಿನ ಪೀಳಿಗೆಯು ಇವರ ಜೀವನದ 50 ವರ್ಷಗಳ ಸಮರ್ಪಣೆಯ ಬದುಕನ್ನು ತಿಳಿದು, ಇತರರಿಗೂ ತಿಳಿಸಬೇಕಾಗಿದೆ.

ಮಾಧವರಾವ್ ಕಾಣೆಯವರಂತಹ ಪ್ರಚಾರಕರ ಜೀವನಯಾತ್ರೆಯನ್ನು ತಿಳಿದರೆ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಅರ್ಥ ಮಾಡಿಕೊಳ್ಳಬಹುದು. ಕಲ್ಯಾಣದ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ 15 ಡಿಸೆಂಬರ್ 1927ರಂದು ಜನಿಸಿ, ಮಹಾರಾಷ್ಟ್ರದ ಥಾಣೆ ಜಿಲ್ಲೆಯ ತಲಾಸರಿ ತಾಲೂಕಿನಲ್ಲಿ ವನವಾಸಿ ಬಾಲಕರ ಶಿಕ್ಷಣಕ್ಕಾಗಿ ಹಾಗೂ ಅವರ ಅಭಿವೃದ್ಧಿಗಾಗಿ ತಮ್ಮ ಜೀವನದ 28 ವರ್ಷಗಳನ್ನು ಸಮರ್ಪಿಸಿಕೊಂಡ ಕಾಣೆ ಅವರು ಜೀವನಪೂರ್ತಿ ಪರರಿಗಾಗಿ ಬದುಕಿದವರು.

"ಉಜ್ವಲವಾದ ಪ್ರಸಿದ್ಧಿ ಕೀರ್ತಿಗಳಿಂದ ದೂರವಿದ್ದು ದಟ್ಟವಾದ ಕತ್ತಲೆಯಲ್ಲಿ ವಿಕಾಸದ ಬಾಗಿಲನ್ನು ತೆರೆಯಲು ಮಾಧವರಾವ್ ಜೀ ತಮ್ಮ ಸಂಪೂರ್ಣ ಜೀವನವನ್ನು ಸಮರ್ಪಿಸಿದರು" ಎಂದು ದತ್ತೋಪಂತ್ ಠೇಂಗಡಿಯವರು ಮಾಧವರಾವ್ ಅವರ ಬದುಕನ್ನು ವರ್ಣಿಸಿದ್ದಾರೆ.

ತಾರುಣ್ಯದಲ್ಲಿ, ಗೋವಾ ವಿಮೋಚನ ಸಂಘರ್ಷದ ಕೊನೆಯವರೆಗೂ ಸತ್ಯಾಗ್ರಹಿಗಳಾಗಿದ್ದ ಮಾಧವರಾವ್ ಅವರು ಮುಂದೆ 1964ರಲ್ಲಿ ಕಲ್ಯಾಣ ನಗರ ಪಾಲಿಕೆಯ ಯುವ ಅಧ್ಯಕ್ಷರಾದರು. ಕಲ್ಯಾಣ ನಗರ ಪಾಲಿಕೆಯಲ್ಲಿ ಅವರ ಅಧಿಕಾರಾವಧಿಯನ್ನು ಅತ್ಯಂತ ಯಶಸ್ವಿ ಕಾಲಾವಧಿ ಎಂದು ಪರಿಗಣಿಸಲಾಗುತ್ತದೆ. ಆದರೆ ಈ ಆಧುನಿಕ ತಪಸ್ವಿ ತನ್ನ ಗುರು ಹಾಗೂ ಕಲ್ಯಾಣದ ವಿಭಾಗ ಪ್ರಚಾರಕರಾಗಿದ್ದ ದಾಮೂ ಅಣ್ಣಾ ಟೋಕೆಕರ್ ಅವರ ಆಹ್ವಾನದ ಮೇರೆಗೆ ರಾಜನೀತಿಯ ತಮ್ಮ ಉಜ್ವಲ ವೃತ್ತಿ ಜೀವನವನ್ನು ತ್ಯಜಿಸಿ ವನವಾಸಿ ಜನರ ಸೇವೆಗಾಗಿ ತಲಾಸರಿಯ ದಟ್ಟವಾದ ಕಾಡುಗಳತ್ತ ಮುಖಮಾಡಿದರು.



ಕಾಣೆಯವರ ಸತತ ಪ್ರಯತ್ನಗಳಿಂದ 1967ರಲ್ಲಿ ಹಿಂದೂ ಸೇವಾ ಸಂಘದ ಮುಖಾಂತರ ಕೇವಲ 5 ವಿದ್ಯಾರ್ಥಿಗಳಿಂದ ಒಂದು ಗುಡಿಸಿಲಿನಲ್ಲಿ 'ವನವಾಸಿ ವಸತಿ ಗೃಹ' ಎಂಬ ಹೆಸರಿನಿಂದ ಬುಡಕಟ್ಟು ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಯಿತು. ನಂತರ ಕಾಣೆಯವರ ಸತತ ಪ್ರಯತ್ನದಿಂದಾಗಿ ಒಂಬತ್ತು ಮುಕ್ಕಾಲು ಎಕರೆಯಷ್ಟು ಭೂಮಿಯು ದಾನವಾಗಿ ವಿದ್ಯಾರ್ಥಿ ನಿಲಯಕ್ಕೆ ದೊರೆಯಿತು.

ಈ ವಿದ್ಯಾರ್ಥಿನಿಲಯದಿಂದ ಕಳೆದ 55 ವರ್ಷಗಳಲ್ಲಿ 2000ಕ್ಕಿಂತಲು ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದಾರೆ. ಇಲ್ಲಿ ಕಲಿತು ಡಾಕ್ಟರ್, ಇಂಜಿನಿಯರ್ ಮುಂತಾದ ಅನೇಕ ಉನ್ನತ ಪದವಿಗಳನ್ನು ಪಡೆದಿರುವ ವಿದ್ಯಾರ್ಥಿಗಳನ್ನು ಸಂಸ್ಕಾರವಂತರನ್ನಾಗಿ ಮಾಡಿ ಸಮಾಜಕ್ಕೆ ಕೊಡುಗೆ ನೀಡುವಲ್ಲಿ ಕಾಣೆ ಅವರ ಕಾಳಜಿ ಯಶಸ್ವಿಯಾಗಿದೆ.

ಕಲ್ಯಾಣದಲ್ಲಿದ್ದ ಅವರ ಕೋಣೆ ಸತತ 24 ವರ್ಷಗಳ ಕಾಲ ವನವಾಸಿ ಮಕ್ಕಳಿಗೆ ಮನೆಯಾಗಿತ್ತು. ಕೇವಲ 17 ವರ್ಷದ ವಯಸ್ಸಿನಲ್ಲಿ ತಮ್ಮ ತಂದೆ ತಾಯಿಗಳನ್ನು ಕಳೆದುಕೊಂಡಿದ್ದ ಮಾಧವರಾವ್ ಅವರಿಗೆ ತಮ್ಮ ಅಂತಿಮ ಸಮಯದಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಾಗ ತಮ್ಮ ಚಿಕಿತ್ಸೆಗೆ ಆಗುವ ವೆಚ್ಚವನ್ನು ವಿದ್ಯಾರ್ಥಿನಿಲಯಕ್ಕಾಗಿ ಉಪಯೋಗಿಸಬೇಕೆಂದು ಡಾಕ್ಟರಲ್ಲಿ ವಿನಂತಿಸಿಕೊಂಡಿದ್ದರು.

"ಮಾಧವರಾವ್ ಅವರು ವಾಸ್ತವಿಕವಾಗಿ ಆಧುನಿಕ ಯುಗದ ಸಂತರಾಗಿದ್ದರು. ಕಾಲ್ನಡಿಗೆಯಲ್ಲೆ ಪ್ರವಾಸ ಮಾಡುತ್ತಿದ್ದರು. ಅವರ ಪ್ರಯತ್ನದಿಂದಲೆ ತಲಾಸರಿ, ದಹಾನು ಹಾಗೂ ಪಾಲಘರ್‌ನಲ್ಲಿದ್ದ ನಕ್ಸಲಿಸಂ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಯಿತು" ಎಂದು ಮಾಧವರಾವ್ ಜೀಯವರೊಂದಿಗೆ ಅವರ ನೆರಳಿನಂತೆ ವಿದ್ಯಾರ್ಥಿನಿಲಯದ ನಿರ್ವಹಣೆಯನ್ನು ಮಾಡುತ್ತಿದ್ದ ಸಂಘದ ತೃತೀಯ ವರ್ಷ ಶಿಕ್ಷಿತ ಸ್ವಯಂಸೇವಕ ಅಪ್ಪಾಜಿ ಜೋಶಿ ಹೇಳುತ್ತಾರೆ.

## ಎಲ್ಲೋ ಕೇಳಿದ ಕಥೆ

### ಮಾತಿನಲ್ಲಿ ಎಚ್ಚರವಿರಬೇಕು

ಒಮ್ಮೆ ಓರ್ವ ಕಾರ್ಯಕರ್ತರು ತಮ್ಮ ಭಾಷಣದಲ್ಲಿ "ರಜಪೂತ ರಮಣಿ' ಎಂಬ ಪದ ಪ್ರಯೋಗ ಮಾಡಿದರು. ಡಾಕ್ಟರ್ ಕೇಶವ ಬಲಿರಾಮ ಹೆಡಗೇವಾರ್ ಅವರಿಗೆ ಅದು ಕಿವಿಯಲ್ಲಿ ಮುಳ್ಳುಚುಚ್ಚಿದ ಅನುಭವ ನೀಡಿತು. ತಮ್ಮ ಧರ್ಮದ ಮತ್ತು ಶೀಲದ ರಕ್ಷಣೆಗಾಗಿ ಯಾರು ಜೌಹಾರ(ಸಾಮೂಹಿಕ ಅಗ್ನಿಪ್ರವೇಶ) ಮೂಲಕ ತಮ್ಮ ಪ್ರಾಣವನ್ನೇ ಸಮರ್ಪಿಸಿದರೋ, ಅಂತಹವರ ಬಗ್ಗೆ ಆ ಪದ ತೀರಾ ಅನುಚಿತವೆನಿಸಿತು. ಭಾಷಣದ ನಂತರ ಆ ಕಾರ್ಯಕರ್ತ ತನ್ನ ಸಮೀಪ ಬಂದಾಗ "ತನ್ನ ಶೀಲದ ರಕ್ಷಣೆಗಾಗಿ ನಗುನಗುತ್ತಾ ಪ್ರಾಣದಾಹುತಿ ನೀಡಿದ ಅವರ ಬಗ್ಗೆ ಉಲ್ಲೇಖಿಸುವಾಗ, ಅವರ ಜ್ವಲಂತ ಚಾರಿತ್ರ್ಯವನ್ನು ಸರಿಯಾಗಿ ಬಿಂಬಿಸುವಂತೆ "ರಜಪೂತ ದೇವಿ" ಎಂದಲ್ಲಿ ಸೂಕ್ತವಾಗುತ್ತಿತ್ತು. ತಮ್ಮ ಆದರ್ಶದಿಂದ ದೈವತ್ವದ ಹಂತಕ್ಕೆ ತಲುಪಿದ್ದವರು ಅವರು" ಎಂದು ತಿಳಿಸಿದ್ದರು.


ನಾವು ಮಾತನಾಡುವ ಒಂದೊಂದು ಶಬ್ದವನ್ನೂ ತೂಗಿತೂಗಿ ಎಚ್ಚರವಹಿಸಿ ಮಾತನಾಡಬೇಕೆಂದು ಅವರು ಎಲ್ಲರಿಗೂ ಕಿವಿಮಾತು ಹೇಳುತ್ತಿದ್ದರು. ಈ ಕಾರಣದಿಂದಾಗಿಯೇ ಡಾಕ್ಟರ್ ಜಿ ಅವರಿಗೆ "ನಾನೆಂದೂ ಹಾಗೆ ಹೇಳಿರಲಿಲ್ಲ", "ನನ್ನ ಮಾತಿನ ಅರ್ಥ ಹೀಗಿದ್ದಂತಹದು", "ನಾನು ಹೇಳಿದ್ದೇ ಬೇರೆ, ನೀವು ತಿಳಿದುಕೊಂಡಿದ್ದೇ ಬೇರೆ", "ನನ್ನ ಮಾತನ್ನು ನೀವು ತಪ್ಪಾಗಿ ತಿಳಿದುಕೊಂಡಿದ್ದೀರಿ" ಇತ್ಯಾದಿ ಹೇಳುವ ಅವಕಾಶ ಎಂದೂ ಬಂದಿರಲಿಲ್ಲ.

ನಮ್ಮ ಮಾತುಗಳಲ್ಲಿಯ ಪದ ಪ್ರಯೋಗ ಹಾಗೂ ನಾವು ಭಾಷಣ ಮಾತ್ರವಲ್ಲ ಎಲ್ಲೇ ಮಾತನಾಡುವಾಗಲೂ ಮಾತನಾಡುವ ಪದಗಳ ಮೇಲಿನ ಹಿಡಿತ, ಯೋಚನೆ ಬಹಳ ಮುಖ್ಯ ಎಂಬುದರ ಅರಿವು ಇದರ ಮೂಲಕ ನಮಗೆ ಅರಿವಾಗುತ್ತದೆ.

## ಪುಸ್ತಕ ಪರಿಚಯ

### ಸಮಾನ ನಾಗರೀಕ ಸಂಹಿತೆ: ನೆನ್ನೆ–ಮೊನ್ನೆ, ಇಂದು–ನಾಳೆ

**ಲೇಖಕರು:** ಡಾ. ಎಂ ಎಸ್ ಚೈತ್ರ, ಪ್ರೊ. ಎ ಷಣ್ಮುಖ
**ಪ್ರಕಾಶಕರು:** ಸಮನ್ವಿತ ಬೆಂಗಳೂರು
**ಬೆಲೆ:** 200/–




ಸಮಾನ ನಾಗರಿಕ ಸಂಹಿತೆ ಎಂದರೇನು, ಜಗತ್ತಿನ ನಾಗರಿಕ ಸಮಾಜಗಳಲ್ಲಿ ಸಂಹಿತೆಗಳನ್ನು ರೂಪಿಸಿ ಅಳವಡಿಸಿಕೊಂಡ ಕಾಲಘಟ್ಟ ಯಾವುದು, ಸಮಾನ ನಾಗರಿಕ ಸಂಹಿತೆಯು ವರ್ತಮಾನದ ಸ್ವರೂಪದಲ್ಲಿ ಎಲ್ಲ ಸಮಸ್ಯೆಗಳಿಗೂ ಪರಿಹಾರವೇ? ಅಥವಾ ಏಕರೂಪ ನಾಗರಿಕ ಸಂಹಿತೆಯಿಂದ ತುಷ್ಟೀಕರಣದ ರಾಜಕಾರಣ ಕೊನೆ ಆಗಬಹುದೇ? ಹೀಗೇ ಹಲವು ಸರಣಿ ಪ್ರಶ್ನೆಗಳನ್ನು ಎದುರಿಗೆ ಇರಿಸಿಕೊಂಡು ಅವಲೋಕನ ಮಾಡಬೇಕು ಎಂದು ಸಮಾಜ ಶಾಸ್ತ್ರದಲ್ಲಿ ಅಧ್ಯಯನ ಮಾಡುತ್ತಿರುವ ಡಾ. ಎಂ ಎಸ್ ಚೈತ್ರ ಮತ್ತು ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಎ ಷಣ್ಮುಖ ಅವರುಗಳ ಸಂಪಾದಕತ್ವದಲ್ಲಿ ಅರಳಿದ ಅಧ್ಯಯನಪೂರ್ಣ ಸಂಶೋಧನಾತ್ಮಕ ಕೃತಿಯಿದು. ಈ ಕೃತಿಯ ಮೂಲಕ ನಾಗರಿಕ ಸಂಹಿತೆಗಳ ಹಿನ್ನೆಲೆ, ವಿಕಾಸ ಮತ್ತು ಆಡಳಿತದಲ್ಲಿ ಅವುಗಳ ರಚನೆ, ವಿನ್ಯಾಸಗಳನ್ನು ಅರಿಯಬಹುದು. ಭಾರತದಲ್ಲಿ ಏಕರೂಪ ನಾಗರಿಕ ಸಂಹಿತೆ ಅನುಷ್ಠಾನದ ಚರ್ಚೆ ನಡೆಯುತ್ತಿರುವ ಕಾಲಘಟ್ಟದಲ್ಲಿ ಇಂತಹ ಪರಿಚಯ ಅವಶ್ಯಕ.

Website: https://www.ayodhyabooks.com/product/samaana-nagareeka-samhithe/

ಸಂಪಾದಕೀಯ ಸಹಕಾರ: ಅರುಣ್ ಶಹಾಪುರ, ಮೇಘಾ ಪ್ರಮೋದ್, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ.

## ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ಗೆ ಟುಲಿಪ್ ಗಾರ್ಡನ್



ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿನ ಟುಲಿಪ್ ಗಾರ್ಡನ್ 1.5 ಮಿಲಿಯನ್ ಹೂವುಗಳನ್ನು ಹೊಂದುವ ಮೂಲಕ ಏಷ್ಯಾದ ಅತಿದೊಡ್ಡ ಉದ್ಯಾನವನವಾಗಿ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ (ಯುಕೆ) ಪುಟಕ್ಕೆ ಸೇರಿದೆ. ಉದ್ಯಾನದಲ್ಲಿನ 68 ವಿಶಿಷ್ಟವಾದ ಟುಲಿಪ್ ಪ್ರಭೇದಗಳು ಅದ್ಭುತ ನೋಟವನ್ನು ನೀಡುತ್ತಿದ್ದು, ಜಬರ್ವಾನ್ ಶ್ರೇಣಿಯ ರಮಣೀಯ ತಪ್ಪಲಿನಲ್ಲಿ ನೆಲೆಸಿರುವ ಈ ಉದ್ಯಾನದ ಸೌಂದರ್ಯಕ್ಕೆ ಪ್ರವಾಸಿಗರು ಮನಸೋಲುತ್ತಿದ್ದಾರೆ.


## ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳು: ಕೇಂದ್ರ ನಿರ್ಧಾರ

ಹೊಸ ಶಿಕ್ಷಣ ನೀತಿ (NEP)ಗೆ ಅನುಗುಣವಾಗಿ ಹೊಸ ಪಠ್ಯಕ್ರಮದ ಚೌಕಟ್ಟನ್ನು ಕೇಂದ್ರ ಶಿಕ್ಷಣ ಸಚಿವಾಲಯ ಪ್ರಕಟಿಸಿದೆ. 2024 ರ ಶೈಕ್ಷಣಿಕ ಅವಧಿಗೆ ಪಠ್ಯಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದಿದೆ. 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳು ಎರಡು ಭಾಷೆಗಳನ್ನು ಅಧ್ಯಯನ ಮಾಡಬೇಕಾಗಿದೆ ಮತ್ತು ಅವುಗಳಲ್ಲಿ ಕನಿಷ್ಠ ಒಂದು ಭಾರತೀಯ ಭಾಷೆಯಾಗಿರಬೇಕು. ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಘೋಷಿಸಿದೆ.

## ವಿಶ್ವದ ಮೊದಲ 100% ಎಥೆನಾಲ್ ಇಂಧನ ಕಾರು ಬಿಡುಗಡೆ

ನವದೆಹಲಿಯಲ್ಲಿ ವಿಶ್ವದ ಮೊದಲ 100 ಪ್ರತಿಶತ ಎಥೆನಾಲ್ ಇಂಧನ ಹೊಂದಿರುವ ಕಾರನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಬಿಡುಗಡೆ ಮಾಡಿದರು. ವಿಶ್ವದ ಮೊದಲ BS-VI (ಹಂತ–II), ಎಲೆಕ್ಟ್ರಿಫೈಡ್ ಫ್ಲೆಕ್ಸ್–ಇಂಧನ ವಾಹನವನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಭಾರತದ ತೈಲ ಆಮದು ವೆಚ್ಚ 16 ಲಕ್ಷ ಕೋಟಿ ರೂಪಾಯಿಗಳಷ್ಟಿದೆ. ಶೇ.40 ರಷ್ಟು ಮಾಲಿನ್ಯವು ಸಾರಿಗೆ ವಲಯದಿಂದ ಬರುತ್ತಿರುವುದು ದೇಶದ ಪ್ರಮುಖ ಕಳವಳವಾಗಿದ್ದು ಮಾಲಿನ್ಯವನ್ನು ತಡೆಯಲು ದೇಶವು ಹೆಚ್ಚು ಸುಸ್ಥಿರತೆಯ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ. ಆದ್ದರಿಂದ ಎಥೆನಾಲ್ ಮಿಶ್ರಣದಿಂದ ಭಾರತದ ಕೃಷಿ ಬೆಳವಣಿಗೆಯು 12 ಪ್ರತಿಶತದಿಂದ 20 ಪ್ರತಿಶತಕ್ಕೆ ಏರುತ್ತದೆ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ.

# ಸಾಲುದ್ದದ ಸುದ್ದಿಗಳು




## ವರ್ಷದೊಳಗೆ 1000 ಖೇಲೋ ಇಂಡಿಯಾ ಕೇಂದ್ರಗಳ ಸ್ಥಾಪನೆ

ದೇಶದಲ್ಲಿ ಒಂದು ವರ್ಷದೊಳಗೆ 1000 ಖೇಲೋ ಇಂಡಿಯಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಘೋಷಿಸಿದರು. ರಾಷ್ಟ್ರೀಯ ಕ್ರೀಡಾ ದಿನದಂದು ನವದೆಹಲಿಯಲ್ಲಿ ಭಾರತೀಯ ಕ್ರೀಡೆಗಳ ಕುರಿತು ಪ್ರಮುಖ ಉಪಕ್ರಮಗಳಿಗೆ ಚಾಲನೆ ನೀಡಿ, ಇದು ಮಾಜಿ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವುದಲ್ಲದೆ, ಉದಯೋನ್ಮುಖ ಕ್ರೀಡಾಪಟುಗಳಿಗೆ ಅನುಭವಿಗಳಿಂದ ಮಾರ್ಗದರ್ಶನ ಪಡೆಯುವ ಅವಕಾಶವನ್ನು ನೀಡುತ್ತದೆ ಎಂದು ಹೇಳಿದರು.

## ಮೇರಾ ಬಿಲ್ ಮೇರಾ ಅಧಿಕಾರ್ ಪ್ರಾರಂಭ

ಖರೀದಿಗಳನ್ನು ಮಾಡುವಾಗ ಗ್ರಾಹಕರಲ್ಲಿ ವಿಶ್ವಾಸ ಮತ್ತು ಭರವಸೆಯನ್ನು ಮೂಡಿಸಲು ಇನ್‌ವಾಯ್ಸ್ (ಸರಕುಪಟ್ಟಿ) ಪ್ರೋತ್ಸಾಹಕ ಯೋಜನೆ ಮೇರಾ ಬಿಲ್ ಮೇರಾ ಅಧಿಕಾರ್ ಪ್ರಾರಂಭವಾಗಿದೆ. ಸಾರ್ವಜನಿಕರಲ್ಲಿ ಹಕ್ಕಿನಿಂದ ಬಿಲ್ ಕೇಳುವ ಸಂಸ್ಕೃತಿ ಮತ್ತು ನಡವಳಿಕೆಯನ್ನು ತರುವುದು ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯನ್ನು ಆರಂಭದಲ್ಲಿ ಅಸ್ಸಾಂ, ಗುಜರಾತ್ ಮತ್ತು ಹರಿಯಾಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಪುದುಚೇರಿ, ದಾದ್ರಾ ನಗರ ಹವೇಲಿ ಮತ್ತು ದಮನ್ ಮತ್ತು ದಿಯುಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭವಾಗಲಿದೆ.

## ರೈಲ್ವೆ ಮಂಡಳಿಗೆ ಮೊದಲ ಮಹಿಳಾ ಅಧ್ಯಕ್ಷೆ ನೇಮಕ



ರೈಲ್ವೆ ಸಚಿವಾಲಯದ 166 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ರೈಲ್ವೆ ಮಂಡಳಿಯ ಸಿಇಒ ಮತ್ತು ಅಧ್ಯಕ್ಷರಾಗಿ ಮಹಿಳೆ ನೇಮಕಗೊಂಡಿದ್ದಾರೆ. ಕೇಂದ್ರ ಸರ್ಕಾರ ಜಯಾ ವರ್ಮಾ ಸಿನ್ಹಾ ಅವರನ್ನು ನೇಮಕ ಮಾಡಿದ್ದು, ಈ ಹುದ್ದೆಯನ್ನು ಅಲಂಕರಿಸಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

## ದೇಶದ 169 ನಗರಗಳಿಗೆ 10,000 ಎಲೆಕ್ಟ್ರಿಕ್ ಬಸ್‌ಗಳು: ಕೇಂದ್ರ

ಮುಂದಿನ ಐದರಿಂದ ಆರು ತಿಂಗಳಲ್ಲಿ 'ಪಿಎಂ–ಇ ಬಸ್ ಸೇವಾ' ಅಡಿಯಲ್ಲಿ 169 ನಗರಗಳಿಗೆ 10,000 ಎಲೆಕ್ಟ್ರಿಕ್–ಬಸ್‌ಗಳನ್ನು (ಇ–ಬಸ್‌ಗಳು) ಒದಗಿಸಲು ಸರ್ಕಾರ ಮುಂದಾಗಿದ್ದು, ಇದರಿಂದ ಸುಧಾರಿತ ಕೊನೆಯ ಮೈಲಿ ಸಂಪರ್ಕವನ್ನು ಸಾಧಿಸಿದಂತಾಗುತ್ತದೆ. ಈ ಯೋಜನೆಯು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ಅನುಷ್ಠಾನಕ್ಕೆ ಬರಲಿದೆ.

# ರೈತರ ಬದುಕನ್ನು ಅದ್ವಿತೀಯಗೊಳಿಸಿದ ಎಂಬಿಎ ಹುಡುಗನ ಕನಸು

ಪ್ರೇರಣಾ

"ಬಹುಕೋಟಿ ಕಂಪನಿಯನ್ನು ಕಟ್ಟುವುದು ಸುಲಭದ ಕೆಲಸವಲ್ಲ, ಆದರೆ ಸಾಹಸದ ಹಸಿವನ್ನು ಹೊಂದಿದ್ದರೆ, ನೀವು ಯಶಸ್ವಿಯಾಗುತ್ತೀರಿ" ಇದು ಅದಿತಿ ಮಿಲ್ಲೆಟ್ಸ್ ಸ್ಥಾಪಿಸಿ ರೈತರಿಗೆ ನೆರವಾಗುತ್ತಿರುವ ಎಂಬಿಎ ಪದವೀಧರ ಸೋಮಶೇಖರ್ ಪೊಗುಳ ಅವರ ಪ್ರಾಮಾಣಿಕ ಅಭಿಪ್ರಾಯ.

ಎಫ್‌ಎಂಸಿಜಿ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದ ಇವರು ಅದಿತಿ ಮಿಲೆಟ್‌ಗಳನ್ನು ಸ್ಥಾಪಿಸುವುದಕ್ಕೆ ಕಾರಣವಾಗಿದ್ದು ತಂದೆಯ ಆರೋಗ್ಯ ತಪಾಸಣೆಗಾಗಿ ನೀಡಿದ ಆಸ್ಪತ್ರೆಯ ಭೇಟಿ! ತನ್ನ ತಂದೆ ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದು ಡಯಾಲಿಸಿಸ್‌ಗೆ ಒಳಗಾಗಬೇಕಾಯಿತು. ಮೂರು ವರ್ಷಗಳ ನಂತರ ಎಲ್ಲಾ ರೀತಿಯ ಪ್ರಯತ್ನದ ಹೊರತಾಗಿಯೂ ಅವರನ್ನು ಕಳೆದುಕೊಳ್ಳಬೇಕಾಯಿತು. ಸೋಮಶೇಖರ್ ಅವರು ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾಗ ಅನೇಕ ರೋಗಿಗಳು ಅನಾರೋಗ್ಯಕರ ಆಹಾರಕ್ರಮಕ್ಕೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಿರುವುದನ್ನು ಗಮನಿಸಿದರು. ಇದಕ್ಕೆ ಕಾರಣ ರಾಸಾಯನಿಕಗಳು ಮತ್ತು ಕೀಟನಾಶಕಗಳಿಂದ ತುಂಬಿರುವ ಆಹಾರ ಉತ್ಪನ್ನಗಳು ಎಂದು ಅವರು ಕಂಡುಕೊಂಡರು. ಹಾಗೆಯೇ ಕೃಷಿಕ ಕುಟುಂಬದಿಂದ ಬಂದ ಸೋಮಶೇಖರ್ ಅವರು ಕೃಷಿ ಸಮುದಾಯದ ಸಮಸ್ಯೆಗಳನ್ನು, ರೈತರ ಆತ್ಮಹತ್ಯೆಗಳನ್ನು ಪ್ರತ್ಯಕ್ಷವಾಗಿ ನೋಡಿದ್ದರಿಂದ ರೈತರಿಗೆ ಸಹಕಾರಿಯಾಗುವ ಕಾರ್ಯಕ್ಕೆ ತೊಡಗಬೇಕೆಂದು ತಮ್ಮ ವೃತ್ತಿಯನ್ನು ಬಿಟ್ಟು ಅದಿತಿ ಮಿಲ್ಲೆಟ್ಸ್ ಸ್ಥಾಪಿಸಿದರು.

'ಮಿಲೆಟ್ಸ್ ಟು ಮಿಲಿಯನ್ಸ್' ಈ ಧ್ಯೇಯದೊಂದಿಗೆ ಸ್ಥಾಪಿತವಾದ ಸಂಸ್ಥೆ ಅದಿತಿ ಮಿಲ್ಲೆಟ್ಸ್. ನೀವು ಸಿರಿಧಾನ್ಯವನ್ನು ಏಕೆ ಆರಿಸಿದ್ದೀರಿ ಎಂದು ಸೋಮಶೇಖರ್ ಅವರನ್ನು ಕೇಳಿದಾಗ, ಸಿರಿ ಧಾನ್ಯಗಳು ಆರೋಗ್ಯಕರ ಮತ್ತು ಉತ್ತಮ ಪೌಷ್ಟಿಕಾಂಶ ಹೊಂದಿದೆ. ಅಲ್ಲದೇ ಸಿರಿ ಧಾನ್ಯಗಳನ್ನು ಬೆಳೆಯುವುದು ಸುಲಭವಾದ್ದರಿಂದ ರೈತರು ದೊಡ್ಡ ಪ್ರಮಾಣದ ಸಾಲವನ್ನು ತೆಗೆದುಕೊಳ್ಳಬೇಕಾಗಿಲ್ಲ ಎಂದು ಹೇಳುತ್ತಾರೆ.



2017ರಲ್ಲಿ 30 ರೈತರೊಂದಿಗೆ ಪ್ರಾರಂಭವಾದ ಅದಿತಿ ಮಿಲ್ಲೆಟ್ಸ್ ತನ್ನ ರೈತ ನೆಲೆಯನ್ನು 200ಕ್ಕಿಂತಲೂ ಹೆಚ್ಚು ಬೆಳೆಸಿದ್ದು ಸುಮಾರು 2 ಕೋಟಿ ರೂಪಾಯಿ ವಹಿವಾಟು ಹೊಂದಿದೆ. ಈ ಉದ್ಯಮವು ರೈತರಿಗೆ ಧಾನ್ಯ ಬೆಳೆಯಲು, ಅವರ ಮಾರುಕಟ್ಟೆ ಸೌಲಭ್ಯವನ್ನು ವಿಸ್ತರಿಸಲು, ಕಾರ್ಪೊರೇಟ್‌ಗಳೊಂದಿಗೆ ವ್ಯಾಪಾರ ಮಾಡಲು ಇತ್ಯಾದಿಗಳಿಗೆ ಉತ್ತೇಜನ ನೀಡುತ್ತ ಬಂದಿದೆ. ಸೋಮಶೇಖರ್ ಅವರು ಕರ್ನೂಲಿನ ಮೂರು ಜಿಲ್ಲೆಗಳ ಏಳು ಹಳ್ಳಿಗಳಲ್ಲಿ ಕೆಲಸ ಮಾಡುತ್ತಾರೆ. ತಡಕಾನ, ಉಳಿಂಡ ಕೊಂಡ, ಘೂದಿಧ, ನಾಗಲಪುರ ಮುಂತಾದ ಕಡೆಯ ರೈತರು ಈ ಉದ್ಯಮದ ಭಾಗವಾಗಿದ್ದಾರೆ.



"ಒಮ್ಮೆ ರೈತರು ಒಪ್ಪಿಕೊಂಡರೆ, ನಾವು ಅವರಿಗೆ MSP (ಕನಿಷ್ಠ ಬೆಂಬಲ ಬೆಲೆ) ಸ್ಪಷ್ಟವಾಗಿ ನಮೂದಿಸಿದ ಕಂಪನಿ ಪತ್ರವನ್ನು ನೀಡುತ್ತೇವೆ. ಈ ಪತ್ರವು ಪ್ರತಿ ಋತುವಿನಲ್ಲಿ ಉಚಿತವಾಗಿ ಬೀಜಗಳನ್ನು ಒದಗಿಸುತ್ತೇವೆ ಎಂಬ ಭರವಸೆಯನ್ನು ನೀಡುತ್ತದೆ. ಋತುವಿಗೆ ಸರಿಯಾದ ಬೀಜಗಳನ್ನು ಆಯ್ಕೆ ಮಾಡಲು ರೈತರೊಂದಿಗೆ ಸಮಾಲೋಚಿಸುತ್ತೇವೆ. ಅವರು ಬೀಜಗಳನ್ನು ಬೆಳೆಸಿದ ನಂತರ ನಾವು ಅವುಗಳನ್ನು ಮರಳಿ ಖರೀದಿಸುತ್ತೇವೆ. ಇದು ಅವರ ಬೆಳೆಗೆ ಮಾರುಕಟ್ಟೆಯನ್ನು ಹುಡುಕುವುದನ್ನು ನಿವಾರಿಸುತ್ತದೆ" ಎಂದು ಸೋಮಶೇಖರ್ ತಿಳಿಸುತ್ತಾರೆ

ಕಾರ್ಖಾನೆಯಲ್ಲಿ, ಗ್ರಾಮದ ಸ್ಥಳೀಯ ಮಹಿಳೆಯರು ಸ್ವಚ್ಛಗೊಳಿಸುವ ಮತ್ತು ಪ್ರತ್ಯೇಕಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಒಮ್ಮೆ ಅವರು ಗುಣಮಟ್ಟವನ್ನು ದೃಢೀಕರಿಸಿದ್ದಲ್ಲಿ, ಸಿರಿಧಾನ್ಯಗಳನ್ನು ಮೌಲ್ಯವರ್ಧಿತ ಉತ್ಪನ್ನಗಳಾಗಿ ಸಂಸ್ಕರಿಸಲಾಗುತ್ತದೆ. ಉದಾಹರಣೆಗೆ ಮಿಲೆಟ್ ದೋಸೆ, ಮಿಲೆಟ್ ಖಿಚಡಿ, ಇತ್ಯಾದಿ ಈ ಉತ್ಪನ್ನಗಳನ್ನು ಅಮೇಜಾನ್ ಮೂಲಕ ಮಾರಾಟ ಮಾಡಲಾಗುತ್ತದೆ.

ಕೊಡುಮೂರು ಗ್ರಾಮದ ಕೆ ಹೇಮಾದ್ರಿ ರೆಡ್ಡಿ ಅವರಿಗೆ ಅದಿತಿ ಮಿಲೆಟ್ಸ್ ಸೇರುವ ಮೊದಲು 4 ಎಕರೆಯಲ್ಲಿ 4,000 ಕೆಜಿ ಧಾನ್ಯ ಸಿಗುತ್ತಿತ್ತು. ಕ್ವಿಂಟಾಲ್‌ಗೆ 5,000 ರೂಪಾಯಿಗಳಂತೆ ಎಂಎಸ್‌ಪಿ ಪಡೆಯುತ್ತಿದ್ದರು. ಅದಿತಿ ಮಿಲ್ಲೆಟ್ಸ್ ಸೇರಿದ ನಂತರ ಮರು ಬೆಳೆ ವಿಧಾನದಿಂದ ಅವರಿಗೆ 4,000 ಕೆಜಿ ಧಾನ್ಯ ಹೆಚ್ಚು ದೊರೆಯಿತು. ಕ್ವಿಂಟಲ್‌ಗೆ 7,000 ರೂ.ಗೆ ಮಾರಾಟ ಮಾಡಲಾಗಿದೆ.

ರೈತರೊಂದಿಗೆ ತಮ್ಮ ಒಡನಾಟವು ಅವರಿಗೆ ಬೀಜಗಳನ್ನು ನೀಡುವುದನ್ನು ಮತ್ತು ಅವರ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಂಡುಕೊಳ್ಳಲು ಸಹಾಯ ಮಾಡುವುದನ್ನು ಮೀರಿದೆ. ರೈತರ ಆತ್ಮಹತ್ಯೆಯಿಂದ ಪೀಡಿತ ಕುಟುಂಬಗಳಿಗೆ ಹೊಲಿಗೆ ಯಂತ್ರಗಳು, ಜಾನುವಾರುಗಳು ಮತ್ತು ಇತರ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಜೀವನೋಪಾಯಕ್ಕಾಗಿ ಸಹಕರಿಸಲಾಗುತ್ತದೆ ಎಂದರು.

ಮೂಲ: ದಿ ಬೆಟರ್ ಇಂಡಿಯಾ

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th SEPTEMBER 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-09-2023



## ಭಾರತ ಭೌತಿಕ ಹಾಗೂ ಆಧ್ಯಾತ್ಮಿಕ ಪ್ರಗತಿಯಾಧಾರಿತವಾಗಿ ಜಗತ್ತನ್ನು ಮುನ್ನಡೆಸುತ್ತದೆ: ಡಾ. ಮೋಹನ್ ಭಾಗವತ್




ಇಲ್ಲಿಯವರೆಗೂ ಯಾರೂ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದಿರಲಿಲ್ಲ. ಆದರೆ ನಮ್ಮ ವಿಜ್ಞಾನಿಗಳ ಸುದೀರ್ಘ ಕಠಿಣ ಪರಿಶ್ರಮದ ಕಾರಣ ಚಂದ್ರನ ದಕ್ಷಿಣ ಧ್ರುವವನ್ನು ತಲುಪುವ ಮೊದಲ ಸಾಧನೆ ಸಾಧ್ಯವಾಗಿದೆ. ಸಂಪೂರ್ಣ ದೇಶಕ್ಕಾಗಿ ಮಾತ್ರವಲ್ಲದೇ ವಿಶ್ವದ ಮಾನವತೆಗಾಗಿ ಈ ಸಾಧನೆ ಸಹಕಾರಿ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಹೇಳಿದರು.

ಇಸ್ರೋ ಉಡಾವಣೆಗೊಳಿಸಿದ ಭಾರತದ ಹೆಮ್ಮೆಯ ಚಂದ್ರಯಾನ–3 ಯೋಜನೆಯ ಯಶಸ್ಸಿನ ನಂತರ ಮಾತನಾಡಿದ ಅವರು ವಸುಧೈವ ಕುಟುಂಬಕಮ್ ಎಂಬ ತನ್ನ ಸ್ನೇಹಯುತ ದೃಷ್ಟಿಯೊಂದಿಗೆ ಭಾರತ ಇಂದು ಇಡೀ ವಿಶ್ವಕ್ಕೆ ಶಾಂತಿ ಹಾಗೂ ಸಮೃದ್ಧಿಯನ್ನು ಪ್ರದಾನ ಮಾಡುವ ಕಾರ್ಯದಲ್ಲಿ ನೇತೃತ್ವವನ್ನು ವಹಿಸಿದೆ. ಅದರ ಪ್ರತೀಕವಾಗಿ ಇಂದು ನಾವೆಲ್ಲರೂ ಆನಂದದಿಂದ ಸಂಭ್ರಮಿಸುತ್ತಿರುವ ಕ್ಷಣ ಸಾಧ್ಯವಾಗಿದೆ. ನಮ್ಮ ವಿಜ್ಞಾನಿಗಳು ನಮ್ಮೆಲ್ಲರಿಗೂ ಧನ್ಯತೆಯ ಭಾವವನ್ನು ಒದಗಿಸಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಕೃತಜ್ಞರು. ಹಾಗೆಯೇ ವಿಜ್ಞಾನಿಗಳಿಗೆ ಪ್ರೋತ್ಸಾಹಿಸಿದ ಸರ್ಕಾರಕ್ಕೂ ಧನ್ಯವಾದಗಳು. ಅವರೆಲ್ಲರಿಗೂ ಅಭಿನಂದನೆಗಳು ಎಂದು ಅಭಿನಂದಿಸಿದರು.

ಭಾರತ ಬೆಳೆಯುವ ಜೊತೆಗೆ ಜಗತ್ತನ್ನು ಬೆಳೆಸುತ್ತಿದೆ. ಹಾಗೂ ಭಾರತ ಭೌತಿಕ ಮತ್ತು ಆಧ್ಯಾತ್ಮಿಕವಾದ ಪ್ರಗತಿಯ ಆಧಾರದ ಮೇಲೆ ವಿಶ್ವವನ್ನು ಮುನ್ನಡೆಸಲಿದೆ ಎಂಬ ಮಾತು ಈಗ ಸತ್ಯವಾಗುತ್ತಿದೆ. ಜ್ಞಾನ ಮತ್ತು ವಿಜ್ಞಾನದ ಕ್ಷೇತ್ರದಲ್ಲಿ ನಾವು ಪ್ರಗತಿ ಸಾಧಿಸೋಣ. ನೀಲಿ ಆಕಾಶದ ರೂಪಕ್ಕೆ ಹೊಸ ಭಾಷ್ಯ ಬರೆಯಲು ಮುಂದಾಗೋಣ. ಭೋಗದ ವಾತಾವರಣದಲ್ಲಿ ತ್ಯಾಗದ ಸಂದೇಶವನ್ನು ನೀಡೋಣ. ದಾಸ್ಯದ ಘನವಾದ ಮೋಡಗಳಿಂದ ಸುಖದ ವರ್ಷಧಾರೆಯಾಗುವಂತೆ ಮಾಡೋಣ. ಈ ಉದ್ದೇಶವನ್ನು ಸಾಕಾರಗೊಳಿಸಲು ಇದೀಗ ಇಡೀ ರಾಷ್ಟ್ರಕ್ಕೆ ಆತ್ಮವಿಶ್ವಾಸ ಹೆಚ್ಚಾಗಿದೆ. ಸ್ವಾತಂತ್ರ್ಯದ ಅಮೃತಮಹೋತ್ಸವದ ಸಂದರ್ಭದಲ್ಲಿ ವಾಸ್ತವವಾಗಿ ಅಮೃತ ವರ್ಷವಾಗಿಸುವ ಕ್ಷಣವನ್ನು ನಾವೆಲ್ಲರೂ ಕಣ್ತುಂಬಿಕೊಳ್ಳುವಂತಾಗಿದೆ. ಅದಕ್ಕಾಗಿ ನಾವು ಧನ್ಯ. ನಾವು ನಮ್ಮ ಕರ್ತವ್ಯಕ್ಕಾಗಿ ಮುಂದುವರೆಯುವ ಅಗತ್ಯವಿದೆ. ಪ್ರಗತಿ ಸಾಧಿಸಲು ಅವಶ್ಯಕವಾದ ಸಾಮರ್ಥ್ಯ, ಕಲಾ ಕೌಶಲ್ಯಗಳು, ದೃಷ್ಟಿ ಎಲ್ಲವೂ ನಮ್ಮ ಬಳಿ ಇದೆ ಎನ್ನುವುದನ್ನು ಚಂದ್ರಯಾನ–3ರ ಯಶಸ್ಸು ಸಾಬೀತುಪಡಿಸಿದೆ. ನಾನು ಮತ್ತೊಮ್ಮೆ ಎಲ್ಲರನ್ನೂ ಅಭಿನಂದಿಸುತ್ತೇನೆ ಹಾಗೂ ಭಾರತ್ ಮಾತಾ ಕೀ ಜೈ ಹೇಳುತ್ತೇನೆ ಎಂದರು.

## ಸೇವೆ ಮತ್ತು ಸಾಂಸ್ಕೃತಿಕ ಜಾಗೃತಿ ವನವಾಸಿ ಕಲ್ಯಾಣ ಆಶ್ರಮದ ಮುಖ್ಯ ಧ್ಯೇಯ: ಸಿ ಆರ್ ಮುಕುಂದ


ಮೈಸೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪ್ರೇರಣೆಗೊಂಡು ಪ್ರಾರಂಭವಾದ ಎಲ್ಲಾ ಸಂಘಟನೆಗಳ ಮುಖ್ಯ ಧ್ಯೇಯ ಸೇವೆ ಮತ್ತು ಸಾಂಸ್ಕೃತಿಕ ಜಾಗೃತಿ. ನಮ್ಮ ಪರಿವಾರ ಸಂಘಟನೆಗಳಲ್ಲಿನ ಸಂಸ್ಕೃತಿಯಲ್ಲಿ ಕಾರ್ಯಾಲಯ ಎನ್ನುವುದು ನಮ್ಮೆಲ್ಲರ ಕಾರ್ಯಗಳಿಗೆ ನಿರಂತರ ಪ್ರೇರಣೆ ನೀಡುವ ಕೇಂದ್ರವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಮುಕುಂದ ಹೇಳಿದರು.

ಮೈಸೂರಿನಲ್ಲಿ ನಡೆದ ವನವಾಸಿ ಕಲ್ಯಾಣ ಆಶ್ರಮದ ಕರ್ನಾಟಕ ಪ್ರಾಂತ ಕಾರ್ಯಾಲಯ "ವನಶ್ರೀ" ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವಾರು ಮೂಲಭೂತ ಸೌಕರ್ಯಗಳಿಂದ ವನವಾಸಿ ಸಮುದಾಯ ಹಿಂದೆ ಉಳಿದಿತ್ತು. ಇದರ ಸಾಮುದಾಯಿಕ ಉನ್ನತಿಗಾಗಿ ವನವಾಸಿ ಕಲ್ಯಾಣ ಆಶ್ರಮದ ಸ್ಥಾಪನೆ ಆಯಿತು. ಕರ್ನಾಟಕದಲ್ಲಿ ಶೇಕಡಾ 7ರಷ್ಟು ಇರುವ ವನವಾಸಿಗಳ ಸಾಂಸ್ಕೃತಿಕ ಮತ್ತು ಜಾಗೃತಿಯ ದೃಷ್ಟಿಯಿಂದ ನಗರವಾಸಿ ಮತ್ತು ಗ್ರಾಮವಾಸಿಗಳೆಲ್ಲರು ಅವರೊಟ್ಟಿಗೆ ಕೈಜೋಡಿಸುವ ಕಾರ್ಯಕ್ಕೆ ಮುಂದಾಗಬೇಕಿದೆ. ಸಮುದಾಯ ಕೊರತೆಗಳನ್ನು ನೀಗಿಸಲು ಅಧ್ಯಯನ ಕೇಂದ್ರಗಳ ಅವಶ್ಯಕತೆ ಇದೆ ಎಂದು ಉದ್ಘಾಟನೆಯಾದ ಕಾರ್ಯಾಲಯದಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಿರುವುದಕ್ಕೆ ಶ್ಲಾಘಿಸಿದರು.



ವನವಾಸಿಗಳನ್ನು ಅನಿಮಿಸ್ಟ್ ಎನ್ನುವುದರ ಮೂಲಕ ಭಾರತದ ಸನಾತನ ಸಂಸ್ಕೃತಿಯಿಂದ ದೂರಗೊಳಿಸುವ ಕೆಲಸ ವಿಘಟನಕಾರಿ ಶಕ್ತಿಗಳಿಂದ ಆಗುತ್ತಿದೆ. ಸ್ವತಃ ಗಾಂಧೀಜಿಯೇ ಅನಿಮಿಸ್ಟ್ ಪದ ದುರುದ್ದೇಶದಿಂದ ಬಳಸಿದ ಪದ ಎಂದಿದ್ದರು. ವನವಾಸಿಗಳನ್ನು ಜನಗಣತಿಯಲ್ಲಿ ನಾವು ಹಿಂದೂಗಳಲ್ಲ ಎಂದು ಬರೆಸುವುದರ ಮೂಲಕ ವಿಘಟಿಸುವ ಕೆಲಸ ನಡೆಯುತ್ತಿದೆ. ನಮ್ಮ ದೇಶದ ಪುರಾಣಗಳ ಜೊತೆ ಏಕತೆಯನ್ನು ಹೊಂದಿರುವ ವನವಾಸಿಗಳನ್ನು ಹಿಂದೂ ಧರ್ಮದಿಂದ ಪ್ರತ್ಯೇಕಿಸುವ ಕೆಲಸ ಅರ್ಬನ್ ನಕ್ಸಲ್‌ಗಳಿಂದ ನಡೆಯುತ್ತಿದೆ ಎಂದು ಎಚ್ಚರಿಸಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾದರು.

## ASIನಿಂದ ಇಂಡಿಯನ್ ಹೆರಿಟೇಜ್ ಆ್ಯಪ್ ಬಿಡುಗಡೆ

143 ಸ್ಮಾರಕಗಳ ವಿವರಗಳೊಂದಿಗೆ ಭಾರತೀಯ ಪುರಾತತ್ವ ಇಲಾಖೆ (ASI) ಇಂಡಿಯನ್ ಹೆರಿಟೇಜ್ ಎಂಬ ಅಪ್ಲಿಕೇಶನ್ ಅನ್ನು ಬಿಡುಗಡೆ ಮಾಡಿದೆ. ಸ್ಮಾರಕಗಳ ಭೌಗೋಳಿಕ ವಿಷಯ, ಸ್ಥಳಗಳು, ಸಾರ್ವಜನಿಕ ಸೌಕರ್ಯಗಳು ಮತ್ತು ಚಿತ್ರಗಳು ಸೇರಿದಂತೆ ಅಧಿಸೂಚಿತ ಮತ್ತು ಅಸುರಕ್ಷಿತ ಪರಂಪರೆಯ ತಾಣಗಳ ಮಾಹಿತಿಯು ಈಗ ಮೊಬೈಲ್ ಫೋನ್ ಬಳಕೆದಾರರಿಗೆ ಲಭ್ಯವಾಗಲಿದೆ. ಈ ಸಂದರ್ಭದಲ್ಲಿ, ಸಂಸ್ಥೆಯು ಸ್ಮಾರಕಗಳ ಸುತ್ತಮುತ್ತಲಿನ ಪ್ರದೇಶಗಳು ಮತ್ತು ಸೌಕರ್ಯಗಳ ಅಭಿವೃದ್ಧಿಗಾಗಿ ಕಾರ್ಪೊರೇಟ್ ಸಂಸ್ಥೆಗಳೊಂದಿಗೆ ಸಹಯೋಗವನ್ನು ಕೋರಿ ಪರಿಷ್ಕರಿಸಿದ 'Adopt a Heritage' ಯೋಜನೆಯನ್ನು ಅನಾವರಣಗೊಳಿಸಿತು.



ASI ರಕ್ಷಣೆಯಲ್ಲಿ 3,696 ಸ್ಮಾರಕಗಳಿವೆ. ಇದು ದೇಶದಾದ್ಯಂತ ವ್ಯಾಪಿಸಿವೆ. ಈ ಸ್ಮಾರಕಗಳು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸುವುದಲ್ಲದೆ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಳ್ಳಲು, ಕಾಲಕಾಲಕ್ಕೆ ಪಾರಂಪರಿಕ ತಾಣಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸುವ ಅವಶ್ಯಕತೆಯಿದೆ. ಈ ಉದ್ದೇಶದೊಂದಿಗೆ ಮತ್ತು ಸಂದರ್ಶಕರ ಅನುಭವವನ್ನು ಮತ್ತಷ್ಟು ಹೆಚ್ಚಿಸಲು, ASI ದೆಹಲಿಯಲ್ಲಿ "ಅಡಾಪ್ಟ್ ಎ ಹೆರಿಟೇಜ್ 2.0" ಕಾರ್ಯಕ್ರಮವನ್ನು ಪ್ರಾರಂಭಿಸಿತು.

ಈ ಕಾರ್ಯಕ್ರಮದ ಅಡಿಯಲ್ಲಿ, ASI ತಮ್ಮ CSR ನಿಧಿಯನ್ನು ಬಳಸಿಕೊಂಡು ಸ್ಮಾರಕಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಲು ಕಾರ್ಪೊರೇಟ್ ಮಧ್ಯಸ್ಥಗಾರರನ್ನು ಆಹ್ವಾನಿಸುತ್ತದೆ. ಪ್ರೋಗ್ರಾಂ 2017ರಲ್ಲಿ ಪ್ರಾರಂಭವಾದ ಹಿಂದಿನ ಯೋಜನೆಯ ಪರಿಷ್ಕೃತ ಆವೃತ್ತಿಯಾಗಿದೆ ಮತ್ತು AMASR ಕಾಯಿದೆ 1958ರ ಪ್ರಕಾರ ವಿವಿಧ ಸ್ಮಾರಕಗಳಿಗೆ ಅಗತ್ಯವಿರುವ ವೈಶಿಷ್ಟ್ಯಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತದೆ. ಮಧ್ಯಸ್ಥಗಾರರು URL www.indianheritage.gov.in ನಲ್ಲಿ ಮೀಸಲಾದ ವೆಬ್ ಪೋರ್ಟಲ್ ಮೂಲಕ ಸ್ಮಾರಕ ಅಥವಾ ಸ್ಮಾರಕದಲ್ಲಿ ನಿರ್ದಿಷ್ಟ ಸೌಲಭ್ಯಗಳಿಗಾಗಿ ಅರ್ಜಿ ಸಲ್ಲಿಸಬಹುದು. ದತ್ತು ಸ್ವೀಕಾರಕ್ಕಾಗಿ ಸ್ಮಾರಕಗಳ ವಿವರಗಳನ್ನು ಪಡೆಯಬಹುದು.

## ಕನ್ನಡ ಮಾಧ್ಯಮದಲ್ಲಿ ಕಲಿಕೆ, ಚಂದ್ರಯಾನ – 3 ಹೆಗ್ಗಳಿಕೆ

ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ವಿದ್ಯಾರ್ಥಿಗಳು ದಾಖಲಾಗುತ್ತಿಲ್ಲ ಎನ್ನುವ ಮಾಹಿತಿ ಹೆಚ್ಚಾಗುತ್ತಿರುವ ಆಘಾತಕಾರಿ ಹೊತ್ತಿನಲ್ಲೇ ಭಾರತದ ಹೆಮ್ಮೆಯ ಚಂದ್ರಯಾನ–3 ಯಶಸ್ಸು, ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳ ಸಾಮರ್ಥ್ಯದ ಪ್ರತೀಕವಾಗಿ ಹೊರಹೊಮ್ಮಿರುವ ಸುದ್ದಿ ವ್ಯಾಪಕವಾಗಿ ಜನಮಾನಸವನ್ನು ಮುಟ್ಟುತ್ತಿದೆ. ಇಸ್ರೋದ ಮಹತ್ವಾಕಾಂಕ್ಷೆಯ ಯೋಜನೆಯಾದ ಚಂದ್ರಯಾನ–3ರ ಭಾಗವಾಗಿದ್ದ ವಿಜ್ಞಾನಿಗಳಲ್ಲಿ ಹಲವರು ಕನ್ನಡ ಮಾಧ್ಯಮ ಶಾಲೆಗಳಲ್ಲಿ ತಮ್ಮ ಶಿಕ್ಷಣವನ್ನು ಪೂರೈಸಿರುವುದು ಗಮನಾರ್ಹ ಸಂಗತಿ. ಅವರಲ್ಲಿ ಕೆಲವರ ಮಾಹಿತಿ ಇಲ್ಲಿದೆ.

ಹಗರಿಬೊಮ್ಮನಹಳ್ಳಿಯ ಪೂಜಾರ್ ತಿಮ್ಮಪ್ಪ ಚಂದ್ರನ ಮೇಲ್ಮೈ ಪರಿಸರ ಅಧ್ಯಯನದಲ್ಲಿ ಜವಾಬ್ದಾರಿ ಹೊಂದಿದ್ದಾರೆ. ಕುಂದಾಪುರದ ರಮೇಶ್ ಆಚಾರ್ಯ ಟೆಕ್ನಿಕಲ್ ಅಸಿಸ್ಟೆಂಟ್ ಆಗಿದ್ದಾರೆ. ನಾಗಮಂಗಲದ ರವಿ ಟಿ ಗೌಡ ಲ್ಯಾಂಡರ್ ಪರೀಕ್ಷಾ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದಾರೆ. ವಿಜಯಪುರದ ಜ್ಯೋತಿ ಸುಲಾಖೆ ಮತ್ತು ಅಭಿಷೇಕ ದೇಶಪಾಂಡೆ, ವಿಲಾಸ್ ರಾಠೋಡ್ ಸಂವಹನ ವಿಭಾಗದಲ್ಲಿದ್ದಾರೆ. ಕೆ.ಆರ್.ಪೇಟೆಯ ಆಕಾಶ್ ನಿಯಂತ್ರಣ ಕೇಂದ್ರದ ತಾಂತ್ರಿಕ ಅಧಿಕಾರಿಯಾಗಿದ್ದಾರೆ. ಕೊಟ್ಟೂರಿನ ಬಿ.ಎಚ್.ಎಂ.ದಾರುಕೇಶ ಸಂದೇಶ ವಾಹಕ ತಯಾರಿಕೆ ನೇತೃತ್ವ ವಹಿಸಿದ್ದರು. ತೀರ್ಥಹಳ್ಳಿಯ ಸುಬ್ರಹ್ಮಣ್ಯ ಉಡುಪ ನ್ಯಾವಿಗೇಷನ್ ಗೈಡ್‌ಲೈನ್ಸ್ ಮತ್ತು ಕಂಟ್ರೋಲಿಂಗ್‌ನಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿದ್ದರು. ಇವರೆಲ್ಲರೂ ಕನ್ನಡ ಮಾಧ್ಯಮ ಶಾಲೆಗಳಲ್ಲಿ ತಮ್ಮ ಶಿಕ್ಷಣವನ್ನು ಪಡೆದಿದ್ದು ಇಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಮಾದರಿ.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.